**ದಿನಾಂಕ:14.09.2023 ರಂದು ಪೂರ್ವಾಹ್ನ : 11.00 ಗಂಟೆಗೆ ಅಪರ ಮುಖ್ಯಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆದ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ 24ನೇ ರಾಜ್ಯ ಮಟ್ಟದ ಪ್ರಗತಿ ಪರಿಶೀಲನ ಸಭೆಯ ನಡವಳಿ.**

*******************************************************************************************

ಶ್ರೀ ಮನೋಜ್ ಜೈನ್, I.A.S, ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ರವರು ಕಲಬುರಗಿಯ ಲೋಕ ಸಭಾ ಸದಸ್ಯರಾದ ಮಾನ್ಯ ಶ್ರೀ. ಉಮೇಶ್. ಜಿ. ಜಾದವ್, ಅಪರ ಮುಖ್ಯಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರಾದ ಡಾ॥ ಶಾಲಿನಿ ರಜನೀಶ್ I.A.S ರವರನ್ನು ಹಾಗೂ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿಗಳಿಗೆ ಸ್ವಾಗತ ಕೋರಿ, ಸಭೆ ಪ್ರಾರಂಭಿಸಲಾಯಿತು.

ದಿನಾಂಕ: 21.07.2022 ರಂದು ನಡೆದ 23ನೇ ರಾಜ್ಯ ಮಟ್ಟದ ಸಭಾ ನಡವಳಿ ಹಾಗೂ ಕೈಗೊಂಡ ನಿರ್ಣಯಗಳ ಬಗ್ಗೆ ಪರಿಶೀಲಿಸಿ ಅಂಗೀಕರಿಸಲಾಯಿತು.

1. **ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ**

ಅಂಗನವಾಡಿ ಸ್ಥಾಪಿಸುವ ಬಗ್ಗೆ ಚರ್ಚಿಸಿದಾಗ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿರವರು 5 ಜಿಲ್ಲೆಗಳ (ಬಾಗಲಕೋಟೆ-33, ಚಾಮರಾಜನಗರ-2, ಬೆಳಗಾವಿ-1, ಮೈಸೂರು-4 ಮತ್ತು ರಾಯಚೂರು-3) ಒಟ್ಟು 43 ಗುರುತಿಸಿರುವ ಜಾಗಗಳ ಮಾಹಿತಿಯನ್ನು ಸಭೆಗೆ ಸಲ್ಲಿಸಿದರು, ಅದರಂತೆ ಅಂಗನವಾಡಿಗಳನ್ನು ಸ್ಥಾಪಿಸಲು ಆಯಾ ಜಿಲ್ಲೆಯ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಜಿಲ್ಲಾ ವಕ್ಫ್ ಅಧಿಕಾರಿಗಳ ಸಹಯೋಗದೊಂದಿಗೆ ಅಂಗನವಾಡಿಗಳನ್ನು ಸ್ಥಾಪಿಸಲು ಸೂಚನೆ ನೀಡಲಾಯಿತು.

ಮುಂದುವರೆದು, ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ಅಂಗನವಾಡಿಗಳನ್ನು ಸ್ಥಾಪಿಸಲು ಈ ಸಾಲಿನಲ್ಲಿ ಅಯವ್ಯಯವನ್ನು ಕಲ್ಪಿಸುವಂತೆ ಹಾಗೂ ಜಿಲ್ಲೆವಾರು ಬೇಡಿಕೆಯನ್ನು ಪಡೆದು 10 ದಿನದೊಳಗಾಗಿ ವರದಿ/ಪ್ರಸ್ತಾವನೆಯನ್ನು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಸಲ್ಲಿಸುವಂತೆ ಸೂಚಿಸಲಾಯಿತು. ಅಂತೆಯೇ, ಸದರಿ ಜಾಗಗಳನ್ನು ವಕ್ಫ್ ಆಸ್ತಿಗೆ ಒಳಪಡುವುದರ ಬಗ್ಗೆ ಪರಿಶೀಲಿಸುವಂತೆ ಹಾಗೂ ಅಲ್ಪಸಂಖ್ಯಾತರ ಬೇಡಿಕಯನ್ವಯ ಸಿದ್ದ ಸಮುದಾಯಭವನಗಳ ಬಗ್ಗೆಯೂ ಸಹ ಪರಿಶೀಲಿಸಿ ವರದಿ ಸಲ್ಲಿಸುವಂತೆ ತಿಳಿಸಲಾಯಿತು.

**(ಕ್ರಮ: ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಮತ್ತು ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ)**

2. <u>ವಸತಿ ಇಲಾಖೆ</u>

ಅಲ್ಪಸಂಖ್ಯಾತರಿಗೆ ಒದಗಿಸುವ ವಸತಿಯ ಮೀಸಲಾತಿ ನೀತಿ ಕುರಿತು ಶೇ.10 ರಿಂದ 15ಕ್ಕೆ ಮೀಸಲಾತಿಯನ್ನು ಹೆಚ್ಚಿಸುವ ಬಗ್ಗೆ ಪ್ರಸ್ತಾವನೆಯನ್ನು ದಿನಾಂಕ:19.07.2023ರಂದು ಸಚಿವ ಸಂಪುಟದ ಅನುಮೋದನೆಗೆ ಮಂಡಿಸಿರುವ ಬಗ್ಗೆ ಗಮನಿಸಲಾಗಿ, ಕೂಡಲೇ ಸಂಪುಟ ಸಭೆಯ ವಿಭಾಗವನ್ನು ಸಂಪರ್ಕಿಸಿ ಅನುಮೋದನೆ ಕುರಿತು ಕ್ರಮವಹಿಸುವಂತೆ ಸೂಚಿಸಲಾಯಿತು.

ಮಾನ್ಯ ಲೋಕಸಭಾ ಸದಸ್ಯರಾದ ಶ್ರೀ ಉಮೇಶ್.ಜಿ ಜಾದವ್ ರವರು ಅಲ್ಪಸಂಖ್ಯಾತರಿಗೆಂದು ಕಲ್ಪಿಸಲಾಗಿರುವ ಶೇಕಡ 10ರ ಮೀಸಲಾತಿಯು ಅಲ್ಪಸಂಖ್ಯಾತರಿಗೆ ತಲುಪುತ್ತಿಲ್ಲವೆಂದು ಸಭೆಗೆ ತಿಳಿಸಿ, ಈ ಬಗ್ಗೆ ವಿವರಣೆಯನ್ನು ಕೋರಿದರು.

ಕೊಳಚೆ ಪ್ರದೇಶದಲ್ಲಿರುವ ಸುಮಾರು 40,000 ಅಲ್ಪಸಂಖ್ಯಾತರನ್ನು ರಾಜೀವ್‌ಗಾಂಧಿ ವಸತಿ ಯೋಜನೆಯಡಿ ತೆಗೆದುಕೊಳ್ಳುವಂತೆ ಕೋರಿದರು. ಫಲಾನುಭವಿಗಳ ಪಟ್ಟಿ ನೀಡುತ್ತಿಲ್ಲ ಎಂದು ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ ರವರು ಸಭೆಯ ಗಮನಕ್ಕೆ ತರಲಾಗಿ, ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರವರು ಫಲಾನುಭವಿಗಳ ಪಟ್ಟಿಯನ್ನು ಅವರಿಗೆ ಒದಗಿಸುವಂತೆ ರಾಜೀವ್‌ಗಾಂಧಿ ವಸತಿ ನಿಗಮದವರಿಗೆ ಸೂಚಿಸಿದರು.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ)**

3. <u>ಅಲ್ಪಸಂಖ್ಯಾತರ ನಿರ್ದೇಶನಾಲಯ – ಕೊಪ್ಪಳ ನಗರದಲ್ಲಿ ಆಸ್ಪತ್ರೆ ನಿರ್ಮಾಣ</u>

ಕೊಪ್ಪಳ ನಗರದಲ್ಲಿ ಆಸ್ಪತ್ರೆ ನಿರ್ಮಾಣದ ಕುರಿತು ಚರ್ಚಿಸಿದಾಗ, ಪ್ರಸ್ತಾವನೆಯು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಸಲ್ಲಿಸಬೇಕಾಗಿರುವುದು ಬಾಕಿ ಇರುವುದನ್ನು ಗಮನಿಸಿ, ಕೂಡಲೇ ಆಸ್ಪತ್ರೆ ಸ್ಥಾಪಿಸುವ ಸಲುವಾಗಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಆಯುಕ್ತರು, ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರಿಗೆ ತಿಳಿಸುವುದಾಗಿ ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ತಿಳಿಸಿದರು.

**(ಕ್ರಮ: ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ)**

4. <u>ಅಲ್ಪಸಂಖ್ಯಾತರಿಗೆ ಹೆಚ್ಚಿನ ಸಾಲ ಬೆಂಬಲ (Enhanced credit support to Minorities)</u>

ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನದಂತೆ Priority Sector lending ಅಡಿ ದುರ್ಬಲ ವರ್ಗಗಳಿಗೆ ಶೇಕಡ 11.5ರಷ್ಟು ಮೀಸಲಾತಿ ನಿಗಧಿಪಡಿಸಲಾಗಿರುತ್ತದೆ. ಈ ಪೈಕಿ ಶೇಕಡ 5.5ರಷ್ಟು ಅಲ್ಪಸಂಖ್ಯಾತರಿಗೆ ನಿಗಧಿಪಡಿಸಲಾಗಿದೆ ಎಂದು ಸಭೆಗೆ ಕನ್ವೀನರ್ ಎಸ್.ಎಲ್.ಬಿ.ಸಿರವರು ತಿಳಿಸಿದರು. ಇದಕ್ಕೆ ಪ್ರತಿಕ್ರಯಿಸಿದ ಅಪರ ಮುಖ್ಯಕಾರ್ಯದರ್ಶಿಗಳು, ಪ್ರಸ್ತುತ ಮೀಸಲಾತಿ ಪ್ರಮಾಣವನ್ನು ಶೇಕಡ 15ಕ್ಕೆ ಹೆಚ್ಚಿಸುವುದರ ಕುರಿತು ಕೇಂದ್ರ ಸರ್ಕಾರ ನಿರ್ಣಯಿಸ ಬೇಕಾಗಿರುವುದರಿಂದ, ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವಂತೆ ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆರವರಿಗೆ ತಿಳಿಸಿದರು.

ಮುಂದುವರೆದು, ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರು ರೂ.50 ಸಾವಿರ ರಿಂದ ರೂ.1.00 ಲಕ್ಷದವರೆಗೆ ದುರ್ಬಲ ವರ್ಗಗಳಿಗೆ ಸಾಲ ನೀಡುವ ಸಂದರ್ಭದಲ್ಲಿ CIBIL score ಮಾನ ದಂಡನೆಯ ನೆಪದಲ್ಲಿ ಸಾಲ ನೀಡಲು ಬ್ಯಾಂಕುಗಳಿಂದ ನಿರಾಕರಿಸುತ್ತಿರುವ ದೂರುಗಳ ಬಗ್ಗೆ ವಿಚಾರಿಸಿದಾಗ, ಈಗಾಗಲೇ ಸದರಿ ಮಾನ ದಂಡನೆಯನ್ನು ತೆಗೆದು ಹಾಕಲಾಗಿದ್ದು, ಕೇವಲ ಸುಸ್ತಿದಾರರಿಗೆ ಮಾತ್ರ ಸಾಲ ನೀಡಲು ನಿರಾಕರಿಸುತ್ತಿರುವುದಾಗಿ ಕನ್ವೀನರ್ ಎಸ್.ಎಲ್.ಬಿ.ಸಿರವರು ಸಭೆಗೆ ತಿಳಿಸಿದರು.

ಇದಕ್ಕೆ ಪ್ರತಿಕ್ರಯಿಸಿದ ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಈ ರೀತಿಯ ಅರ್ಜಿಗಳ ವಿವರಗಳನ್ನು ಬ್ಯಾಂಕ್‌ವಾರು ಮತ್ತು ಫಲಾನುಭವಿವಾರು ಎಸ್.ಎಲ್.ಬಿ.ಸಿ ರವರಿಗೆ ಕ್ರಮಕ್ಕಾಗಿ ಸಲ್ಲಿಸಬಹುದೆಂದು ಅಭಿಪ್ರಾಯ ಪಟ್ಟರು ಮತ್ತು ಎಲ್ಲಾ ಬ್ಯಾಂಕುಗಳಿಗೆ ಸುಸ್ತಿದಾರರನ್ನು ಹೊರತುಪಡಿಸಿ ಬೇರೆ ಅರ್ಜಿದಾರರಿಗೆ ಸಾಲ ನೀಡುವುದರ ಬಗ್ಗೆ ಸುತ್ತೋಲೆಯನ್ನು ಹೊರಡಿಸುವಂತೆ ಕನ್ವೀನರ್, ಎಸ್.ಎಲ್.ಬಿ.ಸಿರವರಿಗೆ ಸೂಚನೆ ನೀಡಲಾಯಿತು.

ಎಸ್.ಎಲ್.ಬಿ.ಸಿ ವತಿಯಿಂದ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮಗಳ ಸಭೆಯಲ್ಲಿ ಚರ್ಚಿಸಿದಂತೆ, ಇನ್ನೊಮ್ಮೆ ಅಲ್ಪಸಂಖ್ಯಾತರು ಮಾತ್ರವಲ್ಲದೆ ಮತ್ತು ದುರ್ಬಲ ವರ್ಗದವರಿಗೂ ಸಹ ಅವರು ಸುಸ್ತಿದಾರರಾಗದ ಹೊರತು ಸಿಬಿಲ್ ಸ್ಕೋರ್ ಕೇಳಬಾರದು ಎಂದು ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರವರು ಎಸ್.ಎಲ್.ಬಿ.ಸಿಯವರಿಗೆ ತಿಳಿಸಿದರು.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕನ್ವೀನರ್, SLBC ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ)**

5. <u>ಗೃಹ ಇಲಾಖೆ</u>

ಪೊಲೀಸ್ ಇಲಾಖೆಯ ನೇಮಕಾತಿ ಕುರಿತಂತೆ ಚರ್ಚಿಸಲಾಗಿ, ಕೇವಲ ಪಿ.ಎಸ್.ಐ ಹಾಗೂ ಕೆಳ ಹಂತದ ಅಧಿಕಾರಿ/ಸಿಬ್ಬಂದಿಗಳ ಮಾಹಿತಿಯನ್ನು ಒದಗಿಸಿದ್ದು, ಪಿ.ಎಸ್.ಐ ಮೇಲ್ಪಟ್ಟ ಅಧಿಕಾರಿಗಳ ಮಾಹಿತಿ ನೀಡಬೇಕಾಗಿರುತ್ತದೆ ಎಂದು ಕಾರ್ಯದರ್ಶಗಳು, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗರವರು ಸಭೆಗೆ ತಿಳಿಸಿದಾಗ ಕೂಡಲೇ ಮಾಹಿತಿಯನ್ನು ಒದಗಿಸುವಂತೆ ತಿಳಿಸಲಾಯಿತು.

**(ಕ್ರಮ: ಅಪರ ಮುಖ್ಯಕಾರ್ಯದರ್ಶಿ, ಗೃಹ ಇಲಾಖೆ)**

6. <u>ಪ್ರಧಾನ ಮಂತ್ರಿ ಜನ ವಿಕಾಸ ಕಾರ್ಯಕ್ರಮ (PMJVK)</u>

ಪ್ರಧಾನ ಮಂತ್ರಿ ಜನ ವಿಕಾಸ ಕಾರ್ಯಕ್ರಮ ಯೋಜನೆಯಡಿ ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಜಿಲ್ಲೆಗಳಿಂದ ಪ್ರಸ್ತಾವನೆಗಳನ್ನು ಸ್ವೀಕರಿಸಿ, ಸದರಿ ಪ್ರಸ್ತಾವನೆ ಕುರಿತು ಪರಿಶೀಲಿಸಲಾಯಿತು ಮತ್ತು ಕೇಂದ್ರ ಸರ್ಕಾರದಿಂದ ಸದರಿ ಪ್ರಸ್ತಾವನೆಗಳ ಅನುಮೋದನೆ ಹಾಗೂ ಅನುದಾನದ ಬಿಡುಗಡೆ ಕುರಿತು ಸನ್ಮಾನ್ಯ ಮುಖ್ಯಮಂತ್ರಿಗಳ ಮುಖೇನ ಕೇಂದ್ರ ಸರ್ಕಾರಕ್ಕೆ ಹಾಗೂ ನಿವಾಸಿ ಆಯುಕ್ತರವರಿಗೆ ಪತ್ರ ಬರೆಯುವಂತೆ ಮತ್ತು ಸದರಿ ಪ್ರಸ್ತಾವನೆಗಳ ಅನುಮೋದನೆ ಚುರುಕುಗೊಳಿಸಲು ಮಾನ್ಯ ಸಂಸತ್ ಸದಸ್ಯರುಗಳಿಗೆ ಪ್ರಸ್ತಾವನೆಯ ಒಂದು ಪ್ರತಿಯನ್ನು ಕಳುಹಿಸಿ ಕೊಡಲು ತಿಳಿಸಲಾಯಿತು.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ)**

7. <u>ಮಾನವ ಅಭಿವೃದ್ಧಿ ಸೂಚ್ಯಂಕ (Human Development Index)</u>

ಮಾನವ ಅಭಿವೃದ್ಧಿ ಸೂಚ್ಯಂಕದ ಪ್ರಕಾರ ಒಟ್ಟಾರೆ ಸೂಚ್ಯಂಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಸಾಮಾನ್ಯ ಸೂಚ್ಯಂಕ 0.75. ಆದರೆ, ಅಲ್ಪಸಂಖ್ಯಾತರು 0.6 ಇರುತ್ತದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಾಮಾನ್ಯ ಸೂಚ್ಯಂಕ 0.55 ಇದ್ದರೆ, ಅಲ್ಪಸಂಖ್ಯಾತರ ಸೂಚ್ಯಂಕ 0.23 ಇರುತ್ತದೆ ಎಂದು ಅಭಿವೃದ್ಧಿ ಆಯುಕ್ತರು ಸಭೆಯ ಗಮನಕ್ಕೆ ತಂದರು.

ಮಾನವ ಅಭಿವೃದ್ಧಿ ಸೂಚ್ಯಂಕ ಕುರಿತು ಚರ್ಚಿಸಿ ಆರೋಗ್ಯ(Health), ಶಿಕ್ಷಣ(Education) ಮತ್ತು ಬದುಕಿನ (Living) ಸೂಚ್ಯಂಕದಲ್ಲಿ ಸಾಮಾನ್ಯ ವರ್ಗಕ್ಕಿಂತ ಅಲ್ಪಸಂಖ್ಯಾತರ ಸೂಚ್ಯಂಕವು ಕಡಿಮೆಯಾಗಿರುವುದನ್ನು ಅಪರ ಮುಖ್ಯಕಾರ್ಯದರ್ಶಿ ಹಾಗೂ

ಅಭಿವೃದ್ಧಿ ಆಯುಕ್ತರವರು ಸಭೆಗೆ ತಿಳಿಸಿದರು ಮತ್ತು ಶಿಕ್ಷಣದ ಕುರಿತಂತೆ, ಮುಖ್ಯವಾಗಿ ಹೆಣ್ಣು ಮಕ್ಕಳ ಶಿಕ್ಷಣ ಮಟ್ಟದ ಪ್ರಮಾಣ ಹೆಚ್ಚಿಸುವ ಕುರಿತು ಬೇಡಿಕೆಗಳು ಇದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ತಿಳಿಸಿದರು.

ಮುಂದುವರೆದು, ಯುವಕರ ಕೌಶಲ್ಯ ಅಭಿವೃದ್ಧಿ ಪಡಿಸಲು ಜಿಲ್ಲಾವಾರು 100 ಯುವಜನರನ್ನು ಆಯ್ಕೆಮಾಡಿ ಪ್ರತಿ ವರ್ಷ ತರಬೇತಿ ನೀಡಲು ಕೌಶಲ್ಯಾಭಿವೃದ್ಧಿ ಇಲಾಖೆಯು ಅಲ್ಪಸಂಖ್ಯಾತರ ನಿರ್ದೇಶನಲಾಯದ ಸಹಯೋಗದೊಂದಿಗೆ ಎಂ.ಓ.ಯು.ನ್ನು ಮಾಡಿ ಕ್ರಮವಹಿಸಲು ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ತಿಳಿಸಿದರು.

ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಹೆಚ್ಚಿಸುವ ಸಲುವಾಗಿ ಯಾವ ರೀತಿಯಾಗಿ ಕ್ರಮಕೈಗೊಳ್ಳಬಹುದೆಂಬದರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲು ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆರವರಿಗೆ ತಿಳಿಸಿದರು.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ)**

8. **ವಿಶೇಷ ಉರ್ದು ಕಸ್ತೂರ ಬಾ ಗಾಂಧಿ ಬಾಲಿಕಾ ವಿದ್ಯಾಲಯಗಳನ್ನು ಹೆಚ್ಚುವರಿಯಾಗಿ ಸ್ಥಾಪಿಸುವ ಕುರಿತು.**

ನಿರ್ದೇಶಕರು ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರು ಉರ್ದುಗೆ ಸಂಬಂಧಿಸಿದಂತೆ, ಕೆಜಿಬಿವಿ ಶಾಲೆಗಳ ಕುರಿತು 2023ನೇ ಸಾಲಿನಲ್ಲಿ ಮಂಜೂರು ಆಗಿರುವುದಿಲ್ಲ ಎಂದು ತಿಳಿಸಿದರು. ಈ ಬಗ್ಗೆ ಉರ್ದು ಅಕಾಡೆಮಿಯಿಂದ 15 ದಿನದೊಳಗಾಗಿ ಅಂತಿಮಗೊಳಿಸಿ ವರದಿ ನೀಡುವಂತೆ ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ತಿಳಿಸಿದರು.

**(ಕ್ರಮ: ರಾಜ್ಯ ಯೋಜನಾ ನಿರ್ದೇಶಕರು ಸಮಗ್ರ ಶಿಕ್ಷಣ)**

(ಡಾ॥ ಶಾಲಿನಿ ರಜನೀಶ್)
ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ
ಹಾಗೂ ಅಭಿವೃದ್ಧಿ ಆಯುಕ್ತರು